ಅಸಲು ದಾವೆ ನಂ.124/2019

ಪಿ.ಡಬ್ಲೂಃ 1- ರಾಮಚಂದ್ರರೆಡ್ಡಿ ಬಿನ್ ರಾಮಕೃಷ್ಣಾರೆಡ್ಡಿ

ದಿನಾಂಕಃ 27/11/2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿ ಪರವಾಗಿ ಶ್ರೀ ಆರ್.ಜೆ.ಬಿ. ವಕೀಲರಿಂದ**

1. ದಿನಾಂಕ 14.12.2012 ರಂದು ನನ್ನ ಹೆಂಡತಿಯಾದ 2 ನೇ ವಾದಿಯು ಸಂಪತ್ ರವರಿಂದ ಇದೇ ದಾವಾ ಸ್ವತ್ತುಗಳಿಗೆ ಸಂಬಂಧಿಸಿ ಒಂದು ನೊಂದಾಯಿತ ಕ್ರಯದ ಕರಾರು ಪತ್ರವನ್ನು ಬರೆಯಿಸಿಕೊಂಡಿದ್ದರು ಎಂದರೆ ಸರಿ. ಈಗ ನನಗೆ ತೋರಿಸಿದ ದಾಖಲೆಯು ಸದರಿ ಕರಾರು ಪತ್ರದ ಡಿಜಿಟಲ್ ನಕಲು ಆಗಿರುತ್ತದೆ ಎಂದರೆ ಸರಿ. ಸದರಿ ದಾಖಲೆಯನ್ನು **ನಿಡಿ-1** ಎಂದು ಗುರುತಿಸಲಾಯಿತು. ನಂತರ ದಿನಾಂಕ 20.03.2014 ರಂದು ಸಂಪತ್ ರವರು 2 ನೇ ವಾದಿಯ ಹೆಸರಿಗೆ ಇದೇ ದಾವಾ ಸ್ವತ್ತುಗಳಿಗೆ ಸಂಬಂಧಿಸಿ ಸದರಿ ಕ್ರಯದ ಕರಾರು ಪತ್ರವನ್ನು ರದ್ದುಪಡಿಸಿ ಒಂದು ನೊಂದಾಯಿತ ಕ್ರಯದ ಕರಾರು ಪತ್ರದ ರದ್ದತಿ ಪತ್ರವನ್ನು ಬರೆಯಿಸಿಕೊಂಡಿರುತ್ತಾರೆ ಎಂದರೆ ಸರಿ. ಈಗ ನನಗೆ ತೋರಿಸಿದ ದಾಖಲೆಯು ಸದರಿ ಕರಾರು ಪತ್ರದ ರದ್ದಿಯಾತಿ ಪತ್ರದ ಡಿಜಿಟಲ್ ನಕಲು ಆಗಿರುತ್ತದೆ ಎಂದರೆ ಸರಿ. ಸದರಿ ದಾಖಲೆಯನ್ನು **ನಿಡಿ-2** ಎಂದು ಗುರುತಿಸಲಾಯಿತು. ಸದರಿ ಸಂಪತ್ ರವರು ದಿನಾಂಕ 25.12.2015 ರಂದು ಮರಣ ಹೊಂದಿರುತ್ತಾರೆ ಎಂದರೆ ಸರಿ.

2. ನಾವು ಹಾಜರುಪಡಿಸಿರುವ ನಿಪಿ-10 ಕ್ರಯ ಪತ್ರವು ನಿವೇಶನ ಸಂಖ್ಯೆ 8 ಕ್ಕೆ ಸಂಬಂಧಿಸಿರುತ್ತದೆ ಎಂದರೆ ಸರಿ. ನಾವು ಈ ದಾವೆಯನ್ನು ಕೇವಲ ನಿವೇಶನ ಸಂಖ್ಯೆ 6 ಮತ್ತು 7 ಕ್ಕೆ ಸಂಬಂಧಿಸಿ ಕ್ರಯ ಪತ್ರ ಬರೆದುಕೊಡಲು ಪ್ರತಿವಾದಿಗೆ ನಿರ್ದೇಶನ ಕೊಡಬೇಕು ಎಂದು ದಾಖಲಿಸಿರುತ್ತೇವೆ ಎಂದರೆ ಸರಿ. ಸಂಪತ್ ರವರು 2 ನೇ ವಾದಿಗೆ ಯಾವತ್ತೂ ನಿಪಿ-1 ರಂತೆ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿಲ್ಲ ಮತ್ತು ಅದೇ ರೀತಿ ಪ್ರತಿವಾದಿಯರು ನನ್ನ ಮತ್ತು 2 ನೇ ವಾದಿಗೆ ಯಾವತ್ತೂ ನಿಪಿ-2 ರಂತೆ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿಲ್ಲ ಮತ್ತು ನಾವು ಸದರಿ ಎರಡೂ ದಾಖಲೆಗಳನ್ನು ನಕಲಿ ಸಹಿಗಳನ್ನು ಮಾಡಿ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ನಿಡಿ-1 ಮತ್ತು 2 ರಲ್ಲಿರುವ ಸಂಪತ್ ರವರ ಸಹಿಗೂ ಮತ್ತು ನಿಪಿ-1 ರಲ್ಲಿರುವ ಸಂಪತ್ ರವರ ಸಹಿ ಆಗಿರುತ್ತದೆ ಎಂದು ನಾವು ಹೇಳುತ್ತಿರುವ ಸಹಿಗೂ ವ್ಯತ್ಯಾಸ ಇರುತ್ತದೆ ಎಂದರೆ ಸರಿಯಲ್ಲ. ನಾವು ನಿಪಿ-1 ಮತ್ತು 2 ರಲ್ಲಿ ಸಂಪತ್ ಹಾಗೂ ಪ್ರತಿವಾದಿಯರ ಸಹಿಗಳನ್ನು ಫೋರ್ಜರಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ದಾಖಲೆಗಳು ನೋಟರಿ ಹತ್ತಿರವೂ ಸಹ ನೊಂದಣಿ ಆಗಿರುವುದಿಲ್ಲ ಎಂದರೆ ಸರಿ. ಅದೇ ರೀತಿ ನಿಪಿ-1 ದಾಖಲೆಯನ್ನು ಯಾರು ತಯಾರಿಸಿರುತ್ತಾರೆ ಎಂದು ಅದರಲ್ಲಿ ಬಿಕ್ಲಂದಾರರ ಸಹಿಯೂ ಸಹ ಇರುವುದಿಲ್ಲ ಎಂದರೆ ಸರಿ. ನಿಪಿ-1 ರಲ್ಲಿರುವ

ಸಂಪತ್ ರವರ ಸಹಿ ಆಗಿರುತ್ತದೆ ಎಂದು ನಾವು ಹೇಳುತ್ತಿರುವ ಸಹಿಯೂ ನಿಜವಾಗಿಯೂ ಅವರದ್ದೆ ಆಗಿರುತ್ತದೆಯೋ ಅಥವಾ ಇಲ್ಲವೋ ಎಂದು ತಿಳಿದುಕೊಳ್ಳಲು ಸದರಿ ದಾಖಲೆಯನ್ನು ಮತ್ತು ನಿಡಿ–1 ಮತ್ತು 2 ದಾಖಲೆಗಳನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲು ನಮ್ಮದು ಯಾವುದೇ ತಕರಾರು ಇರುವುದಿಲ್ಲ. ಅದೇ ರೀತಿ ನಿಪಿ–2 ರಲ್ಲಿರುವ ಮತ್ತು ಪ್ರತಿವಾದಿಯರ ಸಹಿಗಳು ಆಗಿರುತ್ತವೆ ಎಂದು ನಾವು ಹೇಳುತ್ತಿರುವ ಸಹಿಗಳು ನಿಜವಾಗಿಯೂ ಅವರದ್ದೆ ಆಗಿರುತ್ತದೆಯೋ ಅಥವಾ ಇಲ್ಲವೋ ಎಂದು ತಿಳಿದುಕೊಳ್ಳಲು ಸದರಿ ದಾಖಲೆಯನ್ನು ಮತ್ತು ಪ್ರತಿವಾದಿಯರ ಮಾದರಿ ಸಹಿಗಳನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲು ನಮ್ಮದು ಯಾವುದೇ ತಕರಾರು ಇರುವುದಿಲ್ಲ. ನಿಪಿ–1 ದಾಖಲೆಯನ್ನು ದಿನಾಂಕ 15.03.2014 ರಂದು ಬರೆದಾದ ನಂತರ ನಿಡಿ–2 ದಾಖಲೆಯನ್ನು ದಿನಾಂಕ 20.03.2014 ರಂದು ಬರೆಯಲಾಗಿರುತ್ತದೆ. ಸಂಪತ್ ರವರು ದಿನಾಂಕ 20.03.2014 ರಂದು 2 ನೇ ವಾದಿಯ ಹೆಸರಿನಲ್ಲಿ ಇದ್ದ ಕ್ರಯದ ಕರಾರು ಪತ್ರವನ್ನು ರದ್ದು ಪಡಿಸಿಕೊಂಡಿರುವುದರಿಂದ ಅವರು ಅದಕ್ಕೂ ಮುಂಚೆ 2 ನೇ ವಾದಿಯ ಹೆಸರಿಗೆ ನಿಪಿ–1 ರಂತೆ ಕ್ರಯದ ಕರಾರು ಪತ್ರವನ್ನು ಬರೆದುಕೊಡುವ ಪ್ರಶ್ನೆಯೇ ಬರುವುದಿಲ್ಲ ಎಂದರೆ ಸರಿಯಲ್ಲ.

3. ನಮ್ಮ ಮತ್ತು ಪ್ರತಿವಾದಿಯರು ಮನೆಗಳು ಅಕ್ಕ ಪಕ್ಕದಲ್ಲಿದ್ದು ನಾವೆಲ್ಲರೂ 1998 ರಿಂದ ಇಂದಿನವರೆಗೂ ನೆರೆಹೊರೆಯವರಾಗಿ ವಾಸವಾಗಿರುತ್ತೇವೆ. ಸಂಪತ್ ರವರು ನಿವೇಶನ ಸಂಖ್ಯೆ 8 ನ್ನು ನನ್ನ ಮಗನ ಹೆಸರಿಗೆ ನಿಪಿ–10 ರಡಿಯಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಅದೇ ರೀತಿ ನಿಪಿ–2 ರಲ್ಲಿರುವ ಮತ್ತು ಪ್ರತಿವಾದಿಯರ ಸಹಿಗಳು ಆಗಿರುತ್ತವೆ ಎಂದು ನಾವು ಹೇಳುತ್ತಿರುವ ಸಹಿಗಳಿಗೂ ಮತ್ತು ನಿಪಿ–7 ರಿಂದ 9 ದಾಖಲೆಗಳಲ್ಲಿ ಇರುವ ಸಹಿಗಳಿಗೂ ವ್ಯತ್ಯಾಸ ಇರುತ್ತದೆ ಎಂದರೆ ಸರಿಯಲ್ಲ. ನಿಪಿ–3 ರಂತೆ ಪ್ರತಿವಾದಿಯರು ನೋಟೀಸ್ಸನ್ನು ಸ್ವೀಕರಿಸಿದ ನಂತರ ಅವರು ನಮ್ಮನ್ನು ಭೇಟಿ ಮಾಡಿದಾಗ ನಾವು ಸದರಿ ನೋಟೀಸ್ಸಿನ ಮೇಲೆ ಯಾವುದೇ ಕ್ರಮ ಕೈಗೊಳ್ಳುವುದಿಲ್ಲ ಎಂದು ನಾವು ಅವರಿಗೆ ಭರವಸೆ ಕೊಟ್ಟಿದ್ದಕ್ಕೆ ಅವರು ನಮ್ಮ ನೋಟಿಸ್ಸಿಗೆ ಯಾವುದೇ ಉತ್ತರ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

4. ನಾನು ಪೋಲೀಸ್ ಇಲಾಖೆಯಲ್ಲಿ ಒಟ್ಟು 35 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದು ಅದರಲ್ಲಿ 10 ವರ್ಷಗಳ ಸಬ್ ಇನ್ಸಪೆಕ್ಟರ್ ಆಗಿದ್ದೆ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿರುವುದರಿಂದ ಪಾಟೀ ಸವಾಲು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಮುಜಫರ್)
**1 ನೇ ಅಪರ ಹಿರಿಯ ಸಿ.ಜೆ. ಮತ್ತು ಜೆಎಂಎಫ್‌ಸಿ**
**ಕೆಜಿಎಫ್**